# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–1/ಡಿಇ/899/2017/ಎ.ಆರ್.ಇ–11

ಬಹುಮಹಡಿಗಳ ಕಟ್ಟಡ
ಡಾ:ಬಿ.ಆರ್.ಅಂಬೇಡ್ಕರ್ ವೀದಿ
ಬೆಂಗಳೂರು–560001
ದಿನಾಂಕ:16–06–2023

## –:: ಶಿಫಾರಸು ::–

ವಿಷಯ: ಶ್ರೀ.ಎ.ಅರುಣ್, ದ್ವಿತೀಯ ದರ್ಜೆ ಸಹಾಯಕ, ಜಿಲ್ಲಾ ನೋಂದಣಾಧಿಕಾರಿಗಳ ಕಚೇರಿ, ಗಾಂಧಿನಗರ, ಬೆಂಗಳೂರು ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ.ಕಂಇ 23 ಮುನೋಸೇ(3) 2017, ಬೆಂಗಳೂರು, ದಿನಾಂಕ:27/06/2017.
2) ಉಪಲೋಕಾಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂ.ಉಪಲೋಕ್–1/ಡಿಇ/899/2017, ಬೆಂಗಳೂರು, ದಿ:21/07/2017.
3) ಅಪರ ನಿಬಂಧಕರು ವಿಚಾರಣೆಗಳು–11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ವಿಚಾರಣಾ ವರದಿ ದಿ:30/05/2023.

*****

ಸರ್ಕಾರದ ಆದೇಶ ದಿನಾಂಕ:27/06/2017 ರಂತೆ ಶ್ರೀ.ಎ.ಅರುಣ್, ದ್ವಿತೀಯ ದರ್ಜೆ ಸಹಾಯಕ, ಜಿಲ್ಲಾ ನೋಂದಣಾಧಿಕಾರಿಗಳ ಕಚೇರಿ, ಗಾಂಧಿನಗರ, ಬೆಂಗಳೂರು (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರ/ಅಧಿಕಾರಿ ಅಂದರೆ ಚಿಕ್ಕದಾಗಿ 'ಆ.ಸ.ನೌಕರ' ಎಂದು ಸಂಭೋದಿಸಲಾಗುವುದು) ರವರ ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.–

2. ಈ ಸಂಸ್ಥೆಯು ನಾಮನಿರ್ದೇಶನದ ಆದೇಶ ಸಂಖ್ಯೆ:ಉಪಲೋಕ್-1 /ಡಿಇ/899/2017, ಬೆಂಗಳೂರು, ದಿನಾಂಕ:21/07/2017ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು-11 ರವರಿಗೆ 'ಆ.ಸ.ನೌಕರರ' ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.

3. ಆ.ಸ.ನೌಕರರಾದ ಶ್ರೀ.ಎ.ಅರುಣ್, ದ್ವಿತೀಯ ದರ್ಜೆ ಸಹಾಯಕ, ಜಿಲ್ಲಾ ನೋಂದಣಾಧಿಕಾರಿಗಳ ಕಚೇರಿ, ಗಾಂಧಿನಗರ, ಬೆಂಗಳೂರು ರವರ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

## ಅನುಬಂಧ-1

## ದೋಷಾರೋಪಣೆ

ಆಪಾದಿತ ಸರ್ಕಾರಿ ನೌಕರರಾದ ಎ. ಅರುಣ್ ನೀವು ಬೆಂಗಳೂರು ನಗರ ಜಿಲ್ಲೆಯ ಗಾಂಧಿನಗರ ನೊಂದಣಾಧಿಕಾರಿಗಳ ಕಛೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸಿಕೊಂಡಿದ್ದ ಅವದಿಯಲ್ಲಿ ದೂರುದಾರರಾದ ಎಂ. ಹೈದರ್ ಮತ್ತು ಇತರರು ದೊಡ್ಡಬಳ್ಳಾಪುರ ರಸ್ತೆಯಲ್ಲಿ ಅದ್ದೆಗೇಟ್‌ನಲ್ಲಿ ಸಮಾಜ ಪರಿವರ್ತನಾ ಸಮಿತಿ ಎಂಬ ಸಮಾಜ ಸೇವಾ ಸಂಘವನ್ನು ಪ್ರಾರಂಭಿಸುವ ಸಲುವಾಗಿ ನಿಮ್ಮನ್ನು ಭೇಟಿಯಾದಾಗ ದೂರುದಾರರ ಜೊತೆ ನವೀನ್‌ಕುಮಾರ್ ಎಂಬವರು ಸಹ ಎಸ್.ಎನ್.ಕೆ. ಮೀಡಿಯಾ ವರ್ಲ್ಡ್ ಎಂಬ ಸಂಸ್ಥೆಯನ್ನು ನೊಂದಣಿ ಮಾಡಿಸುವ ಸಲುವಾಗಿ ಬಂದಿದ್ದು ನೀವು ಇಬ್ಬರು ದೂರುದಾರರಿಂದ ಒಟ್ಟು ರೂ.20,000/- ಹಣವನ್ನು ನೀಡಬೇಕೆಂದು ಕೇಳಿದ್ದು ಅಂತಿಮವಾಗಿ ರೂ.12,000/-ಗಳ ಲಂಚಕ್ಕಾಗಿ ಒತ್ತಾಯಿಸಿದ್ದು, ದಿನಾಂಕ:19-02-2015 ರಂದು ಬೆಂಗಳೂರಿನ ವೈಯಾಲಿಕಾವಲ್‌ನಲ್ಲಿ ಇರುವ ಆಪಾದಿತ ಸರ್ಕಾರಿ ನೌಕರರ ಕಛೇರಿಗೆ ಮದ್ಯಾಹ್ನ 1-50 ರಿಂದ 1-55 ಗಂಟೆಯ ಅವಧಿಯಲ್ಲಿ ದೂರುದಾರರಿಂದ

ನೆರಳುಸಾಕ್ಷಿದಾರರ ಸಮಕ್ಷಮದಲ್ಲಿ ಲಂಚದ ಹಣವನ್ನು ಪಡೆದುಕೊಂಡು ಕರ್ತವ್ಯಲೋಪ ಎಸಗಿ ಸರ್ಕಾರ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii)ರಡಿಯಲ್ಲಿ ದುರ್ನಡತೆ ಎಸಗಿದ್ದೀರಿ.

4. ವಿಚಾರಣಾಧಿಕಾರಿ (ಅಪರ ನಿಬಂಧಕರು ವಿಚಾರಣೆಗಳು-11), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಆ.ಸ.ನೌಕರರಾದ ಶ್ರೀ.ಎ.ಅರುಣ್, ದ್ವಿತೀಯ ದರ್ಜೆ ಸಹಾಯಕ, ಜಿಲ್ಲಾ ನೋಂದಣಾಧಿಕಾರಿಗಳ ಕಚೇರಿ, ಗಾಂಧಿನಗರ, ಬೆಂಗಳೂರು ರವರ ವಿರುದ್ಧ ಮೇಲ್ಕಾಣಿಸಿದ ದೋಷಾರೋಪಣೆಯನ್ನು ಸಾಬೀತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **'ವಿಫಲವಾಗಿರುತ್ತದೆ'** ಎಂದು ಅಭಿಪ್ರಾಯಿಸಿದ್ದಾರೆ.

5. ವಿಚಾರಣಾಧಿಕಾರಿಯವರು ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಯವರು ಆ.ಸ.ನೌಕರರ ವಿರುದ್ಧ ದೋಷಾರೋಪಣೆಯನ್ನು ಸಾಬೀತುಪಡಿಸಲು ನಾಲ್ವರು ಸಾಕ್ಷಿಗಳನ್ನು ಅಂದರೆ ಪಿ.ಡಬ್ಲ್ಯೂ-1 ರಿಂದ ಪಿ.ಡಬ್ಲ್ಯೂ-4 ರಂತೆ ವಿಚಾರಣೆಗೆ ಒಳಪಡಿಸಿ, ನಿಶಾನೆ ಪಿ-1 ರಿಂದ ಪಿ-17 ರಂತೆ ದಾಖಲಾತಿಗಳನ್ನು ಗುರುತಿಸಿಕೊಂಡಿದ್ದಾರೆ. ಆ.ಸ.ನೌಕರರು ತಮ್ಮ ಪರ ಯಾವೊಬ್ಬ ಸಾಕ್ಷಿಯನ್ನು ಸಹ ವಿಚಾರಣೆ ಮಾಡಿಕೊಂಡಿರುವುದಿಲ್ಲ. ಆದರೆ, ತಮ್ಮ ಪರ ನಿಶಾನೆ ಡಿ-1 ರಿಂದ ನಿಶಾನೆ ಡಿ-3 ರಂತೆ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

6. ಆ.ಸ.ನೌಕರರ ವಿರುದ್ಧ ಆಪಾದಿಸಿದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿ ಹಾಗೂ ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸಿ ಆ.ಸ.ನೌಕರರಾದ ಶ್ರೀ.ಎ.ಅರುಣ್, ದ್ವಿತೀಯ ದರ್ಜೆ ಸಹಾಯಕ, ಜಿಲ್ಲಾ ನೋಂದಣಾಧಿಕಾರಿಗಳ ಕಚೇರಿ, ಗಾಂಧಿನಗರ, ಬೆಂಗಳೂರು ರವರ ವಿರುದ್ಧ ಹೊರಿಸಲಾದ ಆರೋಪಗಳಿಂದ **'ದೋಷಮುಕ್ತಗೊಳಿಸಲು'** ಈ ಮೂಲಕ ಸರ್ಕಾರಕ್ಕೆ ಶಿಫಾರಸು ಮಾಡಿದೆ.

7. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

16/6/22

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
**ಉಪಲೋಕಾಯುಕ್ತ-1**
**ಕರ್ನಾಟಕ ರಾಜ್ಯ**

# ಕರ್ನಾಟಕ ಲೋಕಾಯುಕ್ತ

ಸಂ: ಲೋಕ್/ಐಎನ್‌ಕ್ಯೂ/14–ಎ/354/2013/ಅನಿವಿ.11

ಬಹುಮಹಡಿ ಕಟ್ಟಡ,
ಡಾ.ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು,ದಿ.21.09.2023.

**ಶಿಫಾರಸ್ಸು**

ವಿಷಯ:– ಶ್ರೀ ರವಿ ಅಲಿಯಾಸ್ ರವೀಂದ್ರ, ಪಂಪ್ ಆಪರೇಟರ್/ಕ್ಯಾಷಿಯರ್, ನಗರ ಸಭೆ, ಬೀದರ್, ಅವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ:– 1. ಸರ್ಕಾರಿ ಆದೇಶ ಸಂಖ್ಯೆ: ನಅಇ 51 ಟಿಎಂಎಸ್ 2013 ದಿ.24.8.2013.
2. ನಾಮ ನಿರ್ದೇಶನ ಆದೇಶ ಸಂ.ಲೋಕ್/ಐಎನ್‌ಕ್ಯೂ/14–ಎ/354/2013 ದಿನಾಂಕ 06/10.09.2013.
3. ವಿಚಾರಣಾಧಿಕಾರಿಗಳು ಸಲ್ಲಿಸಿದ ವಿಚಾರಣಾ ವರದಿ ದಿ.20.09.2023.

-----

ಸರ್ಕಾರವು ದಿ.24.08.2013ರ ಆದೇಶದನ್ವಯ ಶ್ರೀ ರವಿ ಅಲಿಯಾಸ್ ರವೀಂದ್ರ, ಪಂಪ್ ಆಪರೇಟರ್/ಕ್ಯಾಷಿಯರ್, ನಗರ ಸಭೆ, ಬೀದರ್, (ಇನ್ನು ಮುಂದೆ ' ಆಪಾದಿತ ಸರ್ಕಾರಿ ನೌಕರರು' ಎಂದು ಉಲ್ಲೇಖಿಸಲಾಗುವುದು) ರವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಉಪಲೋಕಾಯುಕ್ತರಿಗೆ ವಹಿಸಿರುತ್ತದೆ.

2. ಈ ಸಂಸ್ಥೆಯು ನಾಮ ನಿರ್ದೇಶನ ಆದೇಶ ಸಂಖ್ಯೆ: ಲೋಕ್/ಐಎನ್‌ಕ್ಯೂ/14–ಎ/354/2013ದಿನಾಂಕ 06/10.09.2013ರನ್ವಯ ಅಪರ ನಿಬಂಧಕರು ವಿಚಾರಣೆ–4 ಇವರನ್ನು ವಿಚಾರಣಾ ಅಧಿಕಾರಿಗಳನ್ನಾಗಿ ನೇಮಿಸಿ, ಆಪಾದಿತ ಸರ್ಕಾರಿ ನೌಕರರ ವಿರುದ್ಧ

5. ವಿಚಾರಣಾ ವರದಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ಹಾಜರುಪಡಿಸಿರುವ/ಗುರುತಿಸಿರುವ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ವಿಚಾರಣಾಧಿಕಾರಿಗಳ ವರದಿಯನ್ನು ಅಲ್ಲಗಳೆಯಲು ಸಕಾರಣಗಳು ಕಂಡುಬರುವುದಿಲ್ಲ. ಆದುದರಿಂದ ವಿಚಾರಣಾ ಅಧಿಕಾರಿಗಳ ವರದಿಯನ್ನು ಅಂಗೀಕರಿಸಲು ಹಾಗೂ ಆಪಾದಿತ ಸರ್ಕಾರಿ ನೌಕರರಾದ ಶ್ರೀ ರವಿ ಅಲಿಯಾಸ್ ರವೀಂದ್ರ, ಪಂಪ್ ಆಪರೇಟರ್/ಕ್ಯಾಷಿಯರ್, ನಗರ ಸಭೆ, ಬೀದರ್, ಅವರನ್ನು ಆರೋಪಮುಕ್ತಗೊಳಿಸಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6. ಶಿಸ್ತು ಪ್ರಾಧಿಕಾರವು ಈ ಪ್ರಕರಣದಲ್ಲಿ ವಿಚಾರಣಾ ವರದಿ ಹಾಗೂ ಶಿಫಾರಸ್ಸಿನನ್ವಯ ಕೈಗೊಂಡ ಕ್ರಮದ ವರದಿಯನ್ನು ಸಲ್ಲಿಸಲು ಕೋರಲಾಗಿದೆ.

7. ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

21/9/23

**(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)**
**ಉಪಲೋಕಾಯುಕ್ತ.2,**
**ಕರ್ನಾಟಕ ರಾಜ್ಯ.**